ದಿನಾಂಕ 08-11-2024 ರಂದು ಸಾಕ್ಷಿಗೆ ಪ್ರಮಾಣ ವಚನ ಬೋಧಿಸಲಾಯಿತು.

**ಪಾಟೀ ಸವಾಲುಃ ಪ್ರತಿವಾದಿಯವರ ಪರವಾಗಿ ಶ್ರೀ ಎಂ.ಎ.ಎ. ವಕೀಲರವರಿಂದಃ**

ನಾನು ಮತ್ತು 1 ನೇ ಪ್ರತಿವಾದಿಯವರು ಬೇರೆ ಬೇರೆ ಮನೆಯಲ್ಲಿದ್ದದ್ದು 30 ವರ್ಷಗಳ ಒಳಗೆ ಇರುತ್ತದೆ. ನನ್ನ ಮನೆ ಬಾಗಿಲಿನ ಸಂಖ್ಯೆ 1-95 ಎ ಎಂದರೆ ಸರಿ. 1 ನೇ ಪ್ರತಿವಾದಿಯವರ ಮನೆ ಬಾಗಿಲಿನ ಸಂಖ್ಯೆ 1-95 ಎಂದರೆ ಸರಿ. ನಾನು ಮನೆ ಕಟ್ಟಿದ್ದ ಜಾಗದ ಸರ್ವೇ ನಂಬರ್ ನನಗೆ ಈಗ ನೆನಪಿರುವುದಿಲ್ಲ. ನಾನು ಜಾಗ ತೆಗೆದುಕೊಂಡು ಕಟ್ಟಿರುವುದಿಲ್ಲವೆಂದರೆ ಸರಿ. ಭೂನ್ಯಾಯಮಂಡಳಿಯಲ್ಲಿಯೇ ನನ್ನ ಜಾಗವನ್ನು ನನ್ನ ತಂದೆಯವರು ಕಟ್ಟಿರುತ್ತಾರೆ. ನನ್ನ ತಂದೆಯವರು ತೀರಿಕೊಂಡು ಅಂದಾಜು ಸುಮಾರು 20 ವರ್ಷಗಳಾಗಿರುತ್ತದೆ. ನನ್ನ ತಾಯಿಯ ತಾಯಿ ಮನೆ ಸೂಡಾ ಎಂದರೆ ಸರಿ. ನಮಗೆ ಸೇರಿದ ದೈವ ದೇವರುಗಳು ಸೂಡಾದಲ್ಲಿರುತ್ತದೆ. ಪ್ರತಿವಾದಿಯವರಿಗೆ ಸೇರಿದ ದೈವ ದೇವರುಗಳು ಈ ವ್ಯಾಜ್ಯದ ಆಸ್ತಿಯಲ್ಲಿ ಸೇರಿರುತ್ತದೆ ಎಂದರೆ ಸಾಕ್ಷಿದಾರರು ಎಲ್ಲಾ ಕುಟುಂಬದ ದೈವ ದೇವರುಗಳು ಅದೇ ಜಾಗದಲ್ಲಿ ಸೇರಿರುತ್ತಾರೆ. ಪ್ರತಿವಾದಿಯವರು ಈ ಕೇಸ್ ನಲ್ಲಿ ಏನು ಸಾಧನೆ ಮಾಡಿರುತ್ತಾರೆಂದು ನಾನು ಓದಿ ತಿಳಿದುಕೊಂಡಿರುತ್ತೇನೆ. ನಾನು ಈಗ ಚಿಟ್ಪಾಡಿಯಲ್ಲಿ ವಾಸವಾಗಿರುತ್ತೇನೆ. ಚಿಟ್ಪಾಡಿಯಲ್ಲಿ ಬೇರೆ ಮನೆ ಮಾಡಿ ಸುಮಾರು 35 ವರ್ಷಗಳಿಂದ ಇದ್ದೇವೆ. ನನ್ನ ತಂದೆಯವರು ಜೀವಿತ ಇದ್ದರೂ ಸಹ ಅವಾಗ ನಾವು ಒಂದೇ ಮನೆಯಲ್ಲಿ ಬೇರೆ ಬೇರೆ ಅಡಿಗೆ ಮಾಡಿ ಜೀವನ ಮಾಡಿರುತ್ತೇವೆ. ನನ್ನ ತಂದೆಯವರ ಜೀವಿತ ಕಾಲದಲ್ಲಿ ಒಂದೇ ಕೋಣೆ ಮತ್ತು ಜಗಲಿ ನಮ್ಮ ಪಾಲಿಗೆ, ಉಳಿದ ಭಾಗ 1 ನೇ ಪ್ರತಿವಾದಿಯವರಿಗೆ ಸೇರಿತ್ತೆಂದರೆ ಸರಿ, ಆದರೆ ನಾವು ಅಲ್ಲಿ ಬಿಟ್ಟು ಬೇರೆ ಮನೆಯಲ್ಲಿ ಇದ್ದೆವು. ಬೇರೆ ಮನೆ ಮಾಡಿದ ಜಾಗ ಒಟ್ಟು 40 ಸೆಂಟ್ಸ್ ಇರುತ್ತದೆ. ಪಂಚಾಯಿತಿಯಾದ ಸಮಯದಲ್ಲಿ

ರಾಮಶೆಟ್ಟಿ, ಬೊಗ್ರ ಶೆಟ್ಟಿ, ಕಾಳಪ್ಪ ಶೆಟ್ಟಿ ಮತ್ತು ನನ್ನ ತಂದೆಯ ಸೋದರ ಮಾವ ಐತಪ್ಪ ಶೆಟ್ಟಿ ಇದ್ದರು. ಸ್ವದ್ರಿ ಮನೆ ರಿವ್ಯಾಲ್ಯುವೇಷನ್ ಮಾಡಿ ನನಗೆ 8,000/- ರೂಪಾಯಿ ನೀಡಿದ್ದರು ಮತ್ತು 2 ಗದ್ದೆ, 3 ಕೊಯ್ಲಿನ 2 ಗದ್ದೆ ಮತ್ತು 2 ಚಿಕ್ಕ ಗದ್ದೆ ನೀಡಿದ್ದರು. ಆ ಗದ್ದೆಗಳಲ್ಲಿ ಸಹ ನಾವು ವ್ಯವಸಾಯ ಮಾಡುತ್ತಾ ಇದ್ದೇವೆಂದರೆ ಸರಿ. ಉಳಿದ ಗದ್ದೆಗಳನ್ನು ಪ್ರತಿವಾದಿಯವರು ಬೇಸಾಯ ಮಾಡುತ್ತಿದ್ದಾರೆಂದರೆ ಸರಿ. ನಮ್ಮ ಪಾಲಿಗೆ ಬಂದ ಜಾಗದಲ್ಲಿ ಎಷ್ಟು ತೀರುವೆಯನ್ನು ಕಟ್ಟಬೇಕೆಂದರೆ ಸರಿ, ಆದರೆ ಎಷ್ಟು ಬರುತ್ತದೆಂದು ನನಗೆ ಗೊತ್ತಿರುವುದಿಲ್ಲ, ನನ್ನ ತಂಗಿಯವರು ಕಟ್ಟುತ್ತಾರೆ. ಮನೆ ತೆರಿಗೆಯನ್ನು ಸಹ ನನ್ನ ತಂಗಿಯವರು ಕಟ್ಟುತ್ತಾರೆ. ನನ್ನ ತಂಗಿಯವರು 76 ಬಡಗಬೆಟ್ಟು, ಮಾರ್ಪಳ್ಳಿಯಲ್ಲಿ ವಾಸವಾಗಿರುತ್ತಾರೆ. 3 ನೇ ವಾದಿ ಬೆಂಗಳೂರಿನಲ್ಲಿ ವಾಸವಾಗಿರುತ್ತಾರೆ. ಈ ವ್ಯಾಜ್ಯ ಮಾಡುವ ಸಮಯದಲ್ಲಿ ಎಲ್ಲಾ ಸಹೋದರಿಯರು ವ್ಯಾಜ್ಯದ ಆಸ್ತಿಯಲ್ಲಿಯೇ ವಾಸವಾಗಿರುತ್ತಾರೆ. 3 ಸಹೋದರಿಯರು ಒಂದೇ ಮನೆಯಲ್ಲಿ ವಾಸವಾಗಿದ್ದೆವು ಎಂದು ತೋರಿಸಲು ಯಾವುದೇ ನಿಖರವಾದ ಸಾಕ್ಷಿ ಲಭ್ಯವಿರುವುದಿಲ್ಲ. ಸಾಕ್ಷಿದಾರರು ಮುಂದುವರೆದು ಆಧಾರ್ ಕಾರ್ಡ್ ಹೊರತುಪಡಿಸಿ ಬೇರೆ ದಾಖಲೆಗಳು ಇವೆ. ನಾನು ವ್ಯಾಜ್ಯದಲ್ಲಿ ತಿಳಿಸಿದ ವಿಳಾಸದಲ್ಲಿ ನಾವು ಯಾರೂ ವಾಸ ಮಾಡುತ್ತಿಲ್ಲವೆಂದರೆ ಸರಿಯಲ್ಲ. ಪ್ರತಿವಾದಿಯವರು ತಮ್ಮ ಲಿಖಿತ ಹೇಳಿಕೆಯಲ್ಲಿ ಯಾವ ಯಾವ ಜಾಗ ಕೊಟ್ಟಿದ್ದಾರೆಂದು ನಿಖರವಾಗಿ ಹೇಳಿ ಬರೆಸಿರುತ್ತಾರೆಂದರೆ ಸರಿ. ಅಮ್ಮು ಶೆಟ್ಟಿ ಸಹೋದರರು ಐತಪ್ಪ ಶೆಟ್ಟಿಯವರು ನನ್ನ ತಂದೆಗೆ ಸೋದರ ಮಾವ ಎಂದರೆ ಸರಿ. ಸ್ವದ್ರಿ ಪಂಚಾಯಿತಿಯಲ್ಲಿ ಐತಪ್ಪ ಶೆಟ್ಟಿಯವರು ಇದ್ದರು ಅವರ ಮಗ ಇರಲಿಲ್ಲ. 1992 ರಲ್ಲಿ ಪಾಲಾದ ನಂತರ ಈ ವ್ಯಾಜ್ಯ ಹೊರತುಪಡಿಸಿ ಬೇರೆ ಯಾವುದೇ ವ್ಯಾಜ್ಯ ಮಾಡಿದ್ದೀರಾ ಎನ್ನುವ ಪ್ರಶ್ನೆಗೆ ಸಾಕ್ಷಿಯವರು ಬೇರೆ ಪಾಲನ್ನು ಕೊಡಬೇಕೆಂದು ಕೇಳುತ್ತಾ ಇದ್ದೇನೆ. ನಾನು ಪಾಲು ಕೇಳುತ್ತಾ ಇದ್ದೆ ಎಂದು ತೋರಿಸಲು ಬೇರೆ ಯಾವುದೇ ದಾಖಲೆಗಳಿರುವುದಿಲ್ಲ. ವ್ಯಾಜ್ಯ

ಮಾಡುವ ಸಂದರ್ಭದಲ್ಲಿಯೂ ಸಹ ನಮಗೆ ಪಾಲು ಕೊಡಬೇಕೆಂದು ಯಾವುದೇ ನೋಟೀಸ್ ಜಾರಿ ಮಾಡಿರುವುದಿಲ್ಲ. ನಾವು ಬಂಟ್ಸ್ ಕಮಿಟಿ ಸಮಿತಿಗೆ ಸೇರಿದವರೆಂದರೆ ಸರಿ, ನಾವು ಅಳಿಯ ಕಟ್ಟನ್ನು ಆಚರಿಸುವ ಕಾರಣ 1 ನೇ ಪ್ರತಿವಾದಿಯವರು ವ್ಯಾಜ್ಯದ ಆಸ್ತಿಯಲ್ಲಿ ವಾಸ ಮಾಡುತ್ತಿದ್ದಾರೆ ಎಂದರೆ ಸರಿ. ಅಳಿಯ ಕಟ್ಟು ಕಾನೂನಿನ ಪ್ರಕಾರ ನಮ್ಮ ತಂದೆಯವರಿಗೆ ಹಕ್ಕಿಲ್ಲ ಎನ್ನುವ ಕಾರಣದಿಂದಲೇ ಬೇರೆ ಸ್ವತ್ತನ್ನು ಕೊಟ್ಟು ಪಾಲು ಮಾಡಿರುತ್ತಾರೆಂದರೆ ಸರಿಯಲ್ಲ. ಅಳಿಯ ಕಟ್ಟು ಕಾನೂನಿನ ಪ್ರಕಾರ ಮನೆಯ ಯಜಮಾನಿ ಹೆಣ್ಣು ಮಗಳು ಎಂದರೆ ಸರಿ. ಅಳಿಯ ಕಟ್ಟು ಕಾನೂನಿನ ಪ್ರಕಾರ 1 ನೇ ಪ್ರತಿವಾದಿಯವರು ವಾಸಮಾಡಿಕೊಂಡಿರುತ್ತಾರೆ. ಈ ಕಾರಣಕ್ಕಾಗಿ ನಾವು ಬೇರೆ ಮನೆಯಲ್ಲಿ ಪಾಲು ತೆಗೆದುಕೊಂಡು ವಾಸ ಮಾಡುತ್ತಿದ್ದೇವೆಂದರೆ ಸರಿಯಲ್ಲ. ನಮ್ಮ ತಂದೆಯವರ ಜೀವಿತ ಕಾಲದಲ್ಲಿ ಸದ್ರಿ ವ್ಯಾಜ್ಯದ ಮನೆ ನಮಗೆ ಸೇರಬೇಕೆಂದು ತಕರಾರು ಮಾಡಿರುತ್ತಾರೆ ಆದರೆ 1 ನೇ ಪ್ರತಿವಾದಿಯವರು ಬಿಟ್ಟಿರುವುದಿಲ್ಲ. ಈ ಕಾರಣಕ್ಕಾಗಿ ನನ್ನ ತಂದೆ ಹಣ ಮತ್ತು ಜಾಗ ತೆಗೆದುಕೊಂಡು ಬೇರೆ ಕಡೆ ಜೀವನ ಮಾಡಿದ್ದಾರೆಂದರೆ ಸರಿಯಲ್ಲ. 1 ನೇ ಪ್ರತಿವಾದಿಯವರಿಗೆ 4 ಜನ ಗಂಡು ಮಕ್ಕಳು. ನಮ್ಮ ತಂದೆಯವರಿಗೆ 3 ಜನ ಹೆಣ್ಣು ಮಕ್ಕಳು ಮಾತ್ರ. 1992 ನೇ ಇಸವಿಯಲ್ಲಿ ಅಳಿಯ ಕಟ್ಟಿನ ಕಾನೂನಿನ ಪ್ರಕಾರ 1 ನೇ ಪ್ರತಿವಾದಿಯವರಿಗೆ ವ್ಯಾಜ್ಯದ ಆಸ್ತಿಯ ಪಾಲಿನಲ್ಲಿ ಜಾಸ್ತಿ ಬಂದಿರುತ್ತದೆ ಮತ್ತು ನಮ್ಮ ತಂದೆಗೆ ಬೇರೆ ಕಡೆ ಇದೇ ಜಾಗದಲ್ಲಿ ಸ್ವಲ್ಪ ಕಡಿಮೆ ಬಂದಿರುತ್ತದೆಂದರೆ ನಮ್ಮ ತಂದೆಯವರು ಪಾಲು ಮಾಡಿಕೊಟ್ಟಿರುತ್ತಾರೆ. ಅಳಿಯ ಕಟ್ಟಿನ ಕಾನೂನಿನ ಪ್ರಕಾರ ಗಂಡು ಮಕ್ಕಳ ಮಕ್ಕಳಿಗೆ ಪಾಲಿರುವುದಿಲ್ಲ. 1992 ರಲ್ಲಿ ಅಳಿಯ ಕಟ್ಟಿನ ಕಾನೂನಿನ ಪ್ರಕಾರ ಪಾಲಾಗಿರುತ್ತದೆಂದರೆ ಸರಿಯಲ್ಲ. ಸದ್ರಿ ಪಂಚಾಯಿತಿಯಲ್ಲಿ ಐತು ಶೆಟ್ಟಿ, ಅವರ ಮಗ ಮತ್ತು ಸುಂದರ ಶೆಟ್ಟಿಯವರು ಇದ್ದರೆಂದರೆ ಸಾಕ್ಷಿದಾರರು ಕೇವಲ ಐತು ಶೆಟ್ಟಿ ಒಬ್ಬರೇ ಮಾತ್ರ ಇದ್ದರು. ನನಗೆ ನಿಪಿ.1 ರ ಒಡಂಬಡಿಕೆಗಳನ್ನು ಈಗ ನನಗೆ ಹೇಳಲು

ಆಗುವುದಿಲ್ಲ. ವ್ಯಾಜ್ಯದ ಆಸ್ತಿ ನನ್ನ ತಂದೆ ಕಾಡಿ ಶೆಟ್ಟಿಯಾಗಲೀ ಅವರ ತಾಯಿ ಅಮ್ಮು ಶೆಟ್ಟಿಯಾಗಲೀ ಆಸ್ತಿ ಗೇಣಿಗೆ ಮಾಡಿರುವುದಿಲ್ಲ, ಅಮ್ಮು ಶೆಟ್ಟಿಯವರ ಹಿರಿಯರಿಂದ ಬಂದಿರುತ್ತದೆಂದರೆ ನನಗೆ ಗೊತ್ತಿಲ್ಲ. ಸುಮಾರು 100 ವರ್ಷಗಳಿಂದ ಸದ್ರಿ ಆಸ್ತಿ ಅಳಿಯ ಸಂತಾನ ಪ್ರಕಾರವೇ ಅನುಭವ ಮಾಡಿಕೊಂಡು ಬಂದಿರುವಂತಹ ಆಸ್ತಿ ಎಂದರೆ ಸರಿಯಲ್ಲ. ಅದೇ ಪ್ರಕಾರವೇ 1 ನೇ ಪ್ರತಿವಾದಿಯವರು ವ್ಯಾಜ್ಯದ ಆಸ್ತಿಯಲ್ಲಿ ವಾಸ ಮಾಡುತ್ತಿದ್ದಾರೆ ಮತ್ತು ನಮ್ಮ ತಂದೆ ಪಾಲು ತೆಗೆದುಕೊಂಡು ಬೇರೆ ವಾಸವಾಗಿರುತ್ತಾರೆಂದರೆ ಸರಿಯಲ್ಲ. 1992 ರಲ್ಲಿ ಪಾಲಾಗಿರುತ್ತದೆ, ನಾವು ಸದ್ರಿ ಪಾಲನ್ನು ಒಪ್ಪಿ ಹೊರಗೆ ಆಗಿರುತ್ತೇವೆಂದರೆ ಸರಿಯಲ್ಲ. ಹೆಚ್ಚಿನ ಪಾಲು ಪಡೆಯುವ ಉದ್ದೇಶದಿಂದ ಸುಳ್ಳು ಸಾಕ್ಷ್ಯ ನುಡಿಯುತ್ತಿದ್ದೇನೆಂದರೆ ಸರಿಯಲ್ಲ. ನನ್ನ ಅಜ್ಜಿಯವರು ಮೃತಪಟ್ಟ ನಂತರ ಸರಿಯಾದ ಪಾಲನ್ನು ಮಾಡಿಕೊಳ್ಳಿ ಎಂದು ಹೇಳಿದ ವಿಷಯವನ್ನು ನಾನು ನಮ್ಮ ವಕೀಲರಿಗೆ ತಿಳಿಸಿರುವುದಿಲ್ಲ. ಸದ್ರಿ ವ್ಯಾಜ್ಯವನ್ನು ಮಾಡಲು ನಮ್ಮ ವಕೀಲರಿಗೆ ಮಾಹಿತಿಯನ್ನು ನಾನೇ ನೀಡಿರುತ್ತೇನೆ. ನನ್ನ ವಾದ ಪತ್ರದಲ್ಲಿ ನಮಗೂ ಸಹ ಒಂದು ಪಾಲು ಬಂದಿರುತ್ತದೆಂದು ಹೇಳಿದ್ದೀರಾ ಎಂಬ ಪ್ರಶ್ನೆಗೆ ಸಾಕ್ಷಿಯವರು ಹೇಳಿರುವುದಿಲ್ಲ ಎಂದು ನುಡಿಯುತ್ತಾರೆ. 1992 ರಲ್ಲಿ ಸರಿಯಾದ ಪಾಲು ಆಗಿರುತ್ತದೆ. ನಮ್ಮ ಪಾಲನ್ನು ನಾವು ತೆಗೆದುಕೊಂಡು ವಾಸಮಾಡುತ್ತಿದ್ದೇವೆ. ಈಗ ಹೆಚ್ಚಿ ನ ಪಾಲು ಬೇಕೆಂಬ ದುರುದ್ದೇಶದಿಂದ ಸುಳ್ಳು ಸಾಧನೆ ಮಾಡುತ್ತಿದ್ದೇವೆಂದರೆ ಸರಿಯಲ್ಲ. 1992 ರಿಂದ ನಮಗೆ ಪಾಲು ಬಂದಿದ್ದ ಆಸ್ತಿಯಲ್ಲಿ ವಾಸ ಮಾಡಿಕೊಂಡು ಬಂದಿರುತ್ತೇವೆ, ಅದೇ ರೀತಿಯಲ್ಲಿ ಪ್ರತಿವಾದಿಯವರು ಸಹ ಕಾನೂನಾತ್ಮಕ ರೀತಿಯಲ್ಲಿ ವಾಸ ಮಾಡಿಕೊಂಡು ಬಂದಿರುತ್ತಾರೆಂದರೆ ಸರಿಯಲ್ಲ. ಪ್ರತಿವಾದಿಯವರು ನಮ್ಮ ಜಾಗದಲ್ಲಿ ಅವರಿಗೂ ಸಹ ಪಾಲು ಇದೆ ಎಂದು ಎಂದಾದರೂ ಹೇಳಿರುತ್ತಾರೆಯೇ ಎಂದರೆ ಸರಿಯಲ್ಲ. ಸಾಕ್ಷಿದಾರರು ಮುಂದುವರೆದು ಎಂದಿಗೂ ಸಹ ಪಾಲಾಗಿಲ್ಲವೆಂದು ಮುಂದುವರೆದು

ನುಡಿಯುತ್ತಾರೆ. ಈಗ ಈ ವ್ಯಾಜ್ಯ ಹೆಚ್ಚಿ ನ ಪಾಲು ಪಡೆಯಬೇಕೆಂಬ ದುರದ್ದೇಶದಿಂದ ಸುಳ್ಳು ಸಾಧನೆ ಮಾಡುತ್ತಿದ್ದೇನೆಂದರೆ ಸರಿಯಲ್ಲ.

ಮರು ವಿಚಾರಣೆಃ ಇಲ್ಲ.

(ತೆರೆದ ನ್ಯಾಯಾಲಯದಲ್ಲಿ ಸಾಕ್ಷಿಯ ಸಾಕ್ಷ್ಯವನ್ನು ನನ್ನ ಉಕ್ತಲೇಖನದ ಮೂಲಕ ಬೆರಳಚ್ಚು ಮಾಡಿಸಲಾಯಿತು. )

ಓ.ಹೇ.ಕೇ.ಸ.ಇದೆ ಎಂದು ಒಪ್ಪಿದ್ದೇನೆ.

ಹೆ.ಹಿ.ಸಿ.ನ್ಯಾ.ಮತ್ತು ಎಸಿಜೆಎಂ,
ಉಡುಪಿ.